ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-EXAM0ECS2/1/2024 JD-EXAM

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದಿ: 01-03-2024.

**ಜ್ಞಾಪನ**

ವಿಷಯ: ಮೇ 2024ರ ಡಿಸೆಂಬರ್ ಸೆಮಿಸ್ಟರ್ ಥಿಯರಿ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಸುಸಜ್ಜಿತ ಭದ್ರತಾ ಕೊಠಡಿ ಮತ್ತು IT Infrastructure ಗಳನ್ನು ಸಿದ್ದಪಡಿಸುವ ಬಗ್ಗೆ.

ಉಲ್ಲೇಖ: ದಿ: 25-01-2024 ರಂದು ಜರುಗಿದ ತಾಂತ್ರಿಕ ಪರೀಕ್ಷಾ ಮಂಡಳಿಯ 188ನೇ ಕೇಂದ್ರ ಸಭೆಯ ನಿರ್ಣಯ ಸಂಖ್ಯೆ: 188.3.4.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ದಿ: 25-01-2024 ರಂದು ಜರುಗಿದ ತಾಂತ್ರಿಕ ಪರೀಕ್ಷಾ ಮಂಡಳಿಯ 188ನೇ ಕೇಂದ್ರ ಸಭೆಯಲ್ಲಿ ನಿರ್ಣಯಿಸಿರುವಂತೆ ಈಗಾಗಲೇ ನಡೆಸಲಾಗಿರುವ Makeup ಪರೀಕ್ಷೆಗಳು (ಸಿ-20 ಪಠ್ಯಕ್ರಮ) ಹಾಗೂ ಕಳೆದ ಡಿಸೆಂಬರ್ 2023ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯಲ್ಲಿ ಸಿ-03, ಸಿ-05 ಮತ್ತು ಸಿ-15 ಪಠ್ಯಕ್ರಮದ ಪ್ರಶ್ನೆ ಪತ್ರಿಕೆಗಳನ್ನು online ನಲ್ಲಿ ವಿತರಿಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ಜರುಗಿಸಿದ ರೀತಿಯಲ್ಲೇ ಮುಂದಿನ ಮೇ-2024ರ ಥಿಯರಿ ಪರೀಕ್ಷೆಗಳಲ್ಲಿ ಎಲ್ಲಾ ಪಠ್ಯಕ್ರಮಗಳ ಥಿಯರಿ ವಿಷಯಗಳಲ್ಲಿನ ಪ್ರಶ್ನೆ ಪತ್ರಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ online ನಲ್ಲಿಯೇ ವಿತರಿಸಲು ತೀರ್ಮಾನಿಸಲಾಗಿದೆ.

ಈ ಹಿನ್ನಲೆಯಲ್ಲಿ ಮೇ-2024ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗಳನ್ನು ಸುಲಲಿತವಾಗಿ ಹಾಗೂ ಸಮರ್ಪಕವಾಗಿ ಜರುಗಿಸಲು ತಮ್ಮ ಸಂಸ್ಥೆಯಲ್ಲಿನ ಪ್ರಾಂಶುಪಾಲರ ಕೊಠಡಿಗೆ ಹೊಂದಿಕೊಂಡಂತೆ ಆಯಕಟ್ಟಿನ/ಪ್ರವೇಶ ನಿಯಂತ್ರಣ ವ್ಯವಸ್ಥೆಯುಳ್ಳ ವ್ಯವಸ್ಥಿತವಾದ ಭದ್ರತಾ ಕೊಠಡಿಯಲ್ಲಿ ಸಿಸಿಟಿವಿ ಕ್ಯಾಮರಾಗಳ ಕಣ್ಗಾವಲಿನಲ್ಲಿ ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಿ ಪ್ರಶ್ನೆ ಪತ್ರಿಕೆಗಳನ್ನು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಿಂದ ಡೌನ್ಲೋಡ್ ಮಾಡಿ ಅಗತ್ಯ ಸಂಖ್ಯೆಯಲ್ಲಿ ಮುದ್ರಿಸಲು ಈ ಕೆಳಕಂಡ IT infrastructure ಗಳು ಲಭ್ಯವಿರುವಂತೆ ಕ್ರಮ ವಹಿಸಲು ಸೂಚಿಸಲಾಗಿದೆ.

| SL No | IT infrastructure | Nos |
|---|---|---|
| 1 | Desktop Computers (Windows 10 or above) with multimedia system for online video conference | As per needs |
| 2 | 05 KVA online UPS | 01 |
| 3 | Fastest heavy duty laserjet Printers (Duplex + network) | As per needs |
| 4 | Internet Connection (wired/wireless/mobile) | As per needs |
| 5 | Web Cameras with Mic for online video conference | As per needs |
| 6 | CCTV Cameras for whole exam centre and in strong room | As per needs |

ಪ್ರಯುಕ್ತ, ಎಲ್ಲಾ ಸಂಸ್ಥೆ/ಪರೀಕ್ಷಾ ಕೇಂದ್ರಗಳಲ್ಲಿ ಮೇ/2024 ರ ಪರೀಕ್ಷೆಗಳ ಪ್ರಾರಂಭದ ವೇಳೆಗೆ ಮೇಲ್ಕಂಡ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳು ಮತ್ತು IT infrastructure ಗಳನ್ನು ಸ್ಥಾಪಿಸಲು ಕ್ರಮವಹಿಸಲು ಮತ್ತು ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ನೀಡಲು ಸೂಚಿಸಲಾಗಿದೆ.

ಮುಂದುವರೆದು, ಮೇ-2024 ರ ಪರೀಕ್ಷೆಗಳಿಗೆ ಸಂಬಂಧಿಸಿದ ಆಂತರಿಕ ಅಂಕಗಳ ಪರಿವೀಕ್ಷಕರುಗಳು ಪ್ರಸಕ್ತ ಶೈಕ್ಷಣಿಕ ಸೆಮಿಸ್ಟರ್ ಕೊನೆಯ ವಾರದಲ್ಲಿ ತಮ್ಮ ಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ ವರದಿ ನೀಡುವರು.

ಮೇ-2024 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆ ಪ್ರಾರಂಭದಿಂದ ಅಂತ್ಯವರೆಗಿನ ಅವಧಿಯ ಸಿಸಿಟಿವಿ ಕ್ಯಾಮರಾ ರೆಕಾರ್ಡಿಂಗ್‌ಗಳನ್ನು (Electronic Footage) Hard Disc ನಲ್ಲಿ ಸಂಗ್ರಹಿಸಿಟ್ಟು ಅಗತ್ಯವೆನಿಸಿದ ಸಂದರ್ಭದಲ್ಲಿ ಕಾರ್ಯದರ್ಶಿಯವರಿಗೆ ಮುಂದಿನ ಸೂಕ್ತ ತಪಾಸಣೆಗೆ ನೀಡುವುದು. ಈ ವಿಷಯದಲ್ಲಿ ಯಾವುದೇ ಲೋಪಗಳು ಕಂಡು ಬಂದಲ್ಲಿ, ಪರೀಕ್ಷಾ ಕೇಂದ್ರಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

**"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಅಗತ್ಯ ತುರ್ತು ಕ್ರಮ ಕೈಗೊಳ್ಳಲು.

ಪ್ರತಿ:

1. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು – ಮಾಹಿತಿಗಾಗಿ.
2. ಸಂಬಂಧಪಟ್ಟ ಆಂತರಿಕ ಅಂಕಗಳ ಪರಿವೀಕ್ಷಕರುಗಳು – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.